10 ಡಿಸೆಂಬರ್ 2013

ಜೆಪಿಸಿ ಮರೆಮಾಚುವಯತ್ನ ಪ್ರಧಾನಿಯ ಮುಜುಗರ ಹೆಚ್ಚಿಸಿದೆ

ಅರುಣ್‌ಜೇಟ್ಲಿ

ರಾಜ್ಯ ಸಭಾ ವಿರೋಧ ಪಕ್ಷದ ನಾಯಕ

ದೂರವಾಣಿ ಹಾಗೂ ತರಂಗಾಂತರ ಹಂಚಿಕೆ ಮತ್ತು ಬೆಲೆ ನಿಗದಿ ವಿಚಾರವನ್ನು ಪರಿಶೀಲಿಸಲು ಸಂಸತ್ ಜೆಪಿಸಿ ನೇಮಿಸಿತ್ತು.ಸರಳ ಬಹುಮತದೊಂದಿಗೆಅಂಗೀಕರಿಸಲ್ಪಟ್ಟ ಜೆಪಿಸಿ ವರದಿಯನ್ನುಇಂದುರಾಜ್ಯ ಸಭೆಯಲ್ಲಿ ಮಂಡಿಸಲಾಯಿತು.ಇತ್ತೀಚಿಗೆ ನಡೆದ ವಿಧಾನಸಭಾಚುನಾವಣೆಯ ಫಲಿತಾಂಶದಿಂದಕಾಂಗ್ರೆಸ್ ಪಾರ್ಟಿ ಹಾಗೂ ಯುಪಿಎ ಸರ್ಕಾರಯಾವುದೇ ಪಾಠಕಲಿತಿಲ್ಲವೆಂಬುದುಅದರ ನಡವಳಿಕೆಯಿಂದ ಸ್ಪಷ್ಟವಾಗಿದೆ.ಭ್ರಷ್ಟಾಚಾರಕೃತ್ಯದಲ್ಲಿತೊಡಗುವುದು ಹಾಗೂ ಅದನ್ನು ಮರೆಮಾಚಲು ಸಂವೈಧಾನಿಕ ಸಂಸ್ಥೆಗಳ ದುರ್ಬಳಕೆ ಮಾಡಿಕೊಳ್ಳುವುದೇ ಅದರ ಷಡ್ಯಂತ್ರವಾಗಿದೆ.

ಜೆಪಿಸಿ ಪರಿಶೀಲಿಸಿದ ಪ್ರಮುಖ ಅಂಶಗಳು ಇಂತಿವೆ:

1. 2008ರಲ್ಲಿ ಹಂಚಿಕೆಯಾದತರಂಗಾಂತರವನ್ನು 2001ರ ಬೆಲೆಗೆ ನೀಡಬಹುದೆ?
2. ತರಂಗಾಂತರ ಹಂಚಿಕೆ ವಿಧಾನಕ್ಕೆ ಹಾಕಿಕೊಂಡಚೌಕಟನ್ನು ಮಾರ್ಪಡಿಸಬಹುದೇ?
3. ಅಂದಿನ ದೂರಸಂಪರ್ಕಖಾತೆ ಸಚಿವರುತೆಗೆದುಕೊಂಡ ನಿರ್ಣಯದಕುರಿತು ಪ್ರಧಾನ ಮಂತ್ರಿಗಳಿಗೆ ಹಾಗೂ ಹಣಕಾಸು ಸಚಿವರಿಗೆಅರಿವಿತ್ತೆ ಹಾಗೂ ಸಹಮತಿಯಿತ್ತೆ?

ಬಹುಮತದ ವರದಿಯುಇಂತಹ ಹಲವಾರು ವಿಚಾರಗಳನ್ನು ಮೀರಿದೆ.ಎನ್‌ಡಿಎ ಸರ್ಕಾರದ ಮೇಲೆ ಆರೋಪ ಹೊರೆಸಲು ವರದಿಯ ಬಹುಭಾಗ ಮುಡುಪಾಗಿದೆ.ಸ್ವಾಭಾವಿಕವಾಗಿಯೇ ಈ ವರದಿ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ.ಬೋಫೋರ್ಸ್ ಪ್ರಕರಣದ ವಿಚಾರಣೆ ನಡೆಸಿದ ಜೆಪಿಸಿ, ಮಧ್ಯವರ್ತಿಗಳಿಗೆ ಸಲ್ಲಿಕೆಯಾದ ಲಂಚದ ಮೊತ್ತವನ್ನೇಯೋಜನಾಮುಕ್ತಾಯ ಶುಲ್ಕವೆಂದುಕರೆದುಅದಕ್ಕೆ ಹೊಸ

ಅರ್ಥವನ್ನೇ ಕಲ್ಪಿಸಿತ್ತು.ಸಿಬಿಐ ಸಲ್ಲಿಸಿದ ಆರೋಪಪಟ್ಟಿಯು ಈ ಹೊಸ ಅರ್ಥವನ್ನು ತಳ್ಳಿಹಾಕಿದೆ.ಮತಕ್ಕೆ ಬದಲಾಗಿ ನಗದು ಹಗರಣದತನಿಖೆ ನಡೆಸಿದ್ದ ಸಂಸದೀಯ ಸಮಿತಿಯು ವಿಪಕ್ಷದ ಸಂಸದರನ್ನೇ ಆರೋಪಿಗಳೆಂದು ಪರಿಗಣಿಸಿತ್ತು.ಆದರೆಅಧೀನ ನ್ಯಾಯಾಲಯವುಅವರನ್ನು 'ಅಪರಾಧ ಬಹಿರಂಗ ಪಡಿಸಿದವರು' ಎಂದು ಪರಿಗಣಿಸಿ ಆರೋಪಮುಕ್ತಗೊಳಿಸಿದೆ.ಸಂಸದೀಯ ವ್ಯವಸ್ಥೆಯ ಮರ್ಯಾದೆ ಉಳಿಯಲು ಸತ್ಯ ಹೊರಬರಬೇಕಾಗಿದೆಯೇ ಹೊರತುಅದನ್ನು ಮರೆಮಾಚುವುದು ಸೂಕ್ತವಲ್ಲ.

ದೂರಸಂಪರ್ಕ ಜೆಪಿಸಿ ಅಧ್ಯಕ್ಷರಿಗೆ ವಿಪಕ್ಷದ ಸಂಸದರು ನೀಡಿದ ವಿರೋಧದಟಿಪ್ಪಣಿಯನ್ನು ಮೊಟಕುಗೊಳಸಲಾಗಿದೆ.ಇಂದು, ನಾನು ಈ ವಿಚಾರವನ್ನುರಾಜ್ಯ ಸಭೆಯಲ್ಲಿ ಚರ್ಚಿಸಿದೆ.ಸಮಿತಿಯಅಧ್ಯಕ್ಷರು ವಿರೋಧದಟಿಪ್ಪಣಿಯಲ್ಲಿಔಪಚಾರಿಕವಾದಅಥವಾ ಸಂಸತ್‌ಗೌರವಕ್ಕೆ ಮೀರಿದ ಅಂಶಗಳನ್ನು ಮಾತ್ರ ಮೊಟಕುಗೊಳಸಬಹುದೇಅಥವಾ ಸಲ್ಲಿಸಲಾದ ವಿರೋಧದಟಿಪ್ಪಣಿಯ ತಿರುಳನ್ನೇ ಬದಲಾಯಿಸಬಹುದೇ?ಎಂಬ ಪ್ರಶ್ನೆಯನ್ನು ವಿಧಾನ ಸಭೆಯಲ್ಲಿ ನಾನು ಪ್ರಸ್ತಾಪಿಸಿದೆ.ಬದಲಾವಣೆ ಮಾಡುವ ಮೂಲಕ ಅಧ್ಯಕ್ಷರು ಸದಸ್ಯರ ಹಕ್ಕಿಗೆ ಚ್ಯುತಿವುಂಟುಮಾಡಿದ್ದಾರೆ.ಈ ವಿಚಾರದಲ್ಲಿ ಸಭಾಪತಿಗಳು ನಿರ್ಣಯ ನೀಡಬೇಕುಎಂದುಅಪೇಕ್ಷೆ ಪಟ್ಟೆ.ದುರಾದೃಷ್ಟವೆಂದರೆಯಾವುದೇ ನಿರ್ಣಯ ನೀಡಲಾಗಲಿಲ್ಲ.

ಸರ್ಕಾರದತಪ್ಪು ಬಯಲಾಗಿದೆ ಎಂಬ ಒಂದೇಒಂದು ಸಮಾದಾನ ನನ್ನದು.ಅರಸ ನಿರವಸ್ತ್ರನಾಗಿದ್ದಾನೆ. ಜೆಪಿಸಿ ಮೂಲಕ ಸಂಸತ್ ಸತ್ಯ ಸಂಗತಿಯನ್ನು ಮರೆಮಾಚುವಯತ್ನ ಮಾಡಿದರೂ, ಮುಜುಗರತಪ್ಪಿದ್ದಲ್ಲ.

…………………………